ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 1, July-August, 2024, Pp. 70-76
©*IIMRD*, Mysuru
IIMRD JOURNALS
www.iimrd.com

# ಬಳ್ಳಾರಿ ಜಿಲ್ಲೆಯ ಬೇಡ ಮಹಿಳೆಯರ ರಾಜಕೀಯ ಸಹಭಾಗಿತ್ವ: ಒಂದು ಟಿಪ್ಪಣಿ

**ಚಿನ್ನಮ್ಮ ಟಿ.ಎಸ್**
ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ

**ಸಾರಾಂಶ: (Abstract)**

*ಕರ್ನಾಟಕದಲ್ಲಿನ ಬೇಡ ಮಹಿಳೆಯರು ರಾಜಕೀಯ ಸಂಗತಿಗಳ ಬಗ್ಗೆ ಉತ್ತಮ ಅರಿವು ಹೊಂದಿದ್ದಾರೆ. ಶಿಕ್ಷಣ ಆದಾಯ ಮತ್ತು ರಾಜಕೀಯಕ್ಕೂ ಪರಸ್ಪರ ಸಂಬಂಧವಿರುವುದನ್ನು ಹಲವಾರು ಅಧ್ಯಯನಗಳು ಗುರುತಿಸಿವೆ. ಕಡಿಮೆ ಶಿಕ್ಷಣ ಮತ್ತು ಕಡಿಮೆ ಆದಾಯ ಹೊಂದಿರುವ ಮಹಿಳೆಯರು ರಾಜಕೀಯ ವಿದ್ಯಮಾನಗಳ ಕಡಿಮೆ ಅರಿವು ಹೊಂದಿದ್ದರೆ, ವ್ಯತಿರಿಕ್ತವಾಗಿ ಉನ್ನತ ಶಿಕ್ಷಣ ಹಾಗೂ ಉತ್ತಮ ಆದಾಯ ಹೊಂದಿರುವ ಬೇಡ ಮಹಿಳೆಯರು ರಾಜಕೀಯ ಸಂಸ್ಥೆಗಳು ಹಾಗೂ ರಾಜಕಾರಣದ ಬಗ್ಗೆ ಹೆಚ್ಚಿನ ಅರಿವು ಮತ್ತು ಸಹಭಾಗಿತ್ವ ಹೊಂದಿದ್ದಾರೆ. ಶಿಕ್ಷಣ ಮತ್ತು ಆದಾಯ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುತ್ತದೆ ಎಂದು ಈ ಅಧ್ಯಯನದಲ್ಲಿ ಗ್ರಹಿಸಲಾಗಿದೆ. ಪ್ರಸ್ತುತ ಲೇಖನದಲ್ಲಿ ಬಳ್ಳಾರಿ ಜಿಲ್ಲೆಯ ಬೇಡ ಮಹಿಳೆಯರ ರಾಜಕೀಯ ಸಹಭಾಗಿತ್ವವನ್ನು ಕುರಿತು ಅಧ್ಯಯಮ ಮಾಡಲಾಗಿದೆ.*

**ಮುಖ್ಯಪದಗಳು (Keywords):** ಬಳ್ಳಾರಿ ಜಿಲ್ಲೆ, ಬೇಡ ಮಹಿಳೆಯರು, ರಾಜಕೀಯ ಸಹಭಾಗಿತ್ವ, ರಾಜಕೀಯ ಅರಿವು, ಶಿಕ್ಷಣ ಮತ್ತು ಆದಾಯ.

## ಪೀಠಿಕೆ

ರಾಜಕೀಯ ಸಹಭಾಗಿತ್ವವು ಪಕ್ಷಗಳ ಮೂಲಕ ಸ್ಪರ್ಧಿಸುವ, ಮತಚಲಾಯಿಸುವ, ಶಾಸನಗಳನ್ನು ರೂಪಿಸುವ ಒಂದು ಸಮುದಾಯವಾಗಿ ನಿರ್ದಿಷ್ಟ ಸಂಗತಿಗಳಲ್ಲಿ ವಿವೇಚನ ಚಲಾಯಿಸುವ ಅಂಶಗಳನ್ನು ಒಳಗೊಂಡಿದೆ. ಇದು ಮಾಧ್ಯಮಗಳ ಹಾಗೂ ಲಾಬಿಗಳ ಮೂಲಕ ನೀತಿಗಳನ್ನು ಪ್ರಭಾವಿಸುವ ಅಂಶವನ್ನು ಕೂಡ ಅಂತರ್ಗತಗೊಳಿಸಿಕೊಂಡಿದೆ. ರಾಜಕೀಯ ವ್ಯವಸ್ಥೆಯಲ್ಲಿ ಸಹಭಾಗಿತ್ವವು ಅಂತರ್ಗತಗೊಂಡ ಅಂಶವಾಗಿದೆ. ಸಹಭಾಗಿತ್ವವು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮೂಲತತ್ವವೂ ಆಗಿದೆ. ಸಹಭಾಗಿತ್ವವನ್ನು ಅದರ ಇತರೆ ಲಕ್ಷಣಗಳಾದ ಆಳ್ವಿಕೆ, ಸಮಾನತೆ ಹಾಗೂ ಜನತಾ ಪರಮಾಧಿಕಾರ ಮುಂತಾದವುಗಳಿಂದ ಬೇರ್ಪಡಿಸುವಂತಿಲ್ಲ. ಎಲ್ಲಾ ರಾಜಕೀಯ ಚಿಂತಕರು ರಾಜಕೀಯ ಸಹಭಾಗಿತ್ವವನ್ನು ಕ್ರಿಯಾಶೀಲ ಶಕ್ತಿಯಾಗಿ, ನಿರಂಕುಶತ್ವದ ವಿರುದ್ಧ ರಕ್ಷಣೆಯಾಗಿ ಹಾಗೂ ಸಾಮೂಹಿಕ ವಿವೇಚನೆಯ ಮಾಧ್ಯಮವಾಗಿ ಪರಿಭಾವಿಸಿದ್ದಾರೆ. ಸರ್ಕಾರದ ನಿರ್ಣಯಗಳನ್ನು ಪ್ರಭಾವಿಸಲು ರೂಪುಗೊಂಡ ಚಟುವಟಿಕೆಗಳೇ ರಾಜಕೀಯ ಸಹಭಾಗಿತ್ವವಾಗಿದೆ ಎಂದು ಹಂಟಿಂಗ್‌ಟನ್ ಅಭಿಪ್ರಾಯಪಟ್ಟಿದ್ದಾರೆ. ಹರ್ಬರ್ಟ್ ಮ್ಯಾಕ್‌ಲೋಸ್ಕಿ

*Please cite this article as:* ಚಿನ್ನಮ್ಮ ಟಿ.ಎಸ್. (2024). ಬಳ್ಳಾರಿ ಜಿಲ್ಲೆಯ ಬೇಡ ಮಹಿಳೆಯರ ರಾಜಕೀಯ ಸಹಭಾಗಿತ್ವ: ಒಂದು ಟಿಪ್ಪಣಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರಿಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(1). ಪು.ಸಂ.* 70–76

ರಾಜಕೀಯ ಸಹಭಾಗಿತ್ವವು ಸಮಾಜದ ಸದಸ್ಯರ ಸ್ವಯಂ ಚಟುವಟಿಕೆಯಾಗಿದ್ದು ಅದು ಆಳುವವರನ್ನು ಆಯ್ಕೆ ಮಾಡುವ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಾರ್ವಜನಿಕ ನೀತಿಯಲ್ಲಿ ಪಾಲ್ಗೊಳ್ಳುವ ಚಟುವಟಿಕೆಯಾಗಿದೆ[1] ಎಂದು ಹೇಳಿದ್ದಾರೆ.

ರಾಜಕೀಯ ಸಹಭಾಗಿತ್ವವು ಸರ್ಕಾರದ ವ್ಯಾಪ್ತಿಯಲ್ಲಿ ನಡೆಯುವ ಚಟುವಟಿಕೆಗಳಾಗಿವೆ. ರಾಜಕೀಯ ಸಹಭಾಗಿತ್ವವೆಂದರೆ ರಾಜಕೀಯ ಕ್ರಿಯೆಗಳನ್ನು ರೂಪಿಸುವ ಮನಶಾಸ್ತ್ರೀಯ ಪ್ರಕ್ರಿಯೆ ಎನ್ನುವ ಮೂಲಕ ಅಲ್ಮಾಂಡ್ ಹಾಗೂ ವೆರ್ಬ್ ಅವರು ರಾಜಕೀಯ ಸಹಭಾಗಿತ್ವಕ್ಕಿರುವ ಮನಶಾಸ್ತ್ರೀಯ ಆಯಾಮವನ್ನು ಗುರುತಿಸಿದ್ದಾರೆ. ರಾಜಕೀಯ ಸಹಭಾಗಿತ್ವದ ವ್ಯಾಪ್ತಿಯನ್ನು ನಂತರದ ದಿನಗಳಲ್ಲಿ ವ್ಯಾಪಕವಾಗಿ ಪರಿಭಾವಿಸಲಾಗಿತ್ತು. ಪ್ರಾರಂಭಿಕ ವ್ಯಾಖ್ಯಾನಗಳು ರಾಜಕೀಯ ಸಹಭಾಗಿತ್ವವನ್ನು ರಾಜಕೀಯ ಚರ್ಚೆ, ಸಂಘಟನೆ, ಪ್ರಚಾರ ಹಾಗೂ ಸಭೆಗಳಲ್ಲಿ ಪಾಲ್ಗೊಳ್ಳುವ ಕ್ರಿಯೆಗೆ ಸೀಮಿತಗೊಳಿಸಿದ್ದವು. ನಂತರದ ದಿನಗಳಲ್ಲಿ ಸಹಭಾಗಿತ್ವವನ್ನು ಚುನಾವಣಾ ಪ್ರಕ್ರಿಯೆಯ ಮೂಲಕ ವ್ಯಕ್ತಿ ಗುಂಪುಗಳನ್ನು ಪ್ರಭಾವಿಸುವ ನೆಲೆಯಲ್ಲಿ ವಿಶಾಲವಾಗಿ ಪರಿಭಾವಿಸಲಾಯಿತು.

ರಾಜಕೀಯ ಸಹಭಾಗಿತ್ವವು ವ್ಯಕ್ತಿ ಹಾಗೂ ಸಮುದಾಯಗಳ ಹಿತಾಸಕ್ತಿಗಳ ಅಭಿವ್ಯಕ್ತತೆಗೆ ಅವಕಾಶ ನೀಡುತ್ತದೆ. ರಾಜಕೀಯ ಸಹಭಾಗಿತ್ವ ಎಂದರೇನು? ಎಂಬ ಪ್ರಶ್ನೆಯ ಜೊತೆಗೆ ಸಹಭಾಗಿತ್ವವನ್ನು ಮಾಪನ ಮಾಡುವುದು ಹೇಗೆ ಎನ್ನುವ ಪ್ರಶ್ನೆಯು ಸೇರಿಕೊಂಡಿದೆ. ಸಹಭಾಗಿತ್ವವನ್ನು ವಿವಿಧ ಹಂತಗಳಲ್ಲಿ ನಡೆಯುವ ರಾಜಕೀಯ ಪ್ರಕ್ರಿಯೆ ಎಂದು ಪರಿಗಣಿಸಿ ಸಹಭಾಗಿತ್ವದ ಮಾಪನಕ್ಕೆ ಪ್ರಯತ್ನಿಸಲಾಗಿದೆ. ಈ ಹಂತಗಳಲ್ಲಿಯೂ ಬೇಡ ಮಹಿಳೆಯು ಯಾವ ಹಂತಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾಳೆ ಎಂಬುದನ್ನು ನೋಡುವುದು ಅಗತ್ಯವಾಗಿದೆ. ರಾಜ್ಯಶಾಸ್ತ್ರಜ್ಞರು ವ್ಯಕ್ತಿಯು ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ವಿವಿಧ ಹಂತಗಳನ್ನು ಕನಿಷ್ಠ ಹಂತದ ಚಟುವಟಿಕೆಗಳು, ಮಧ್ಯಂತರ ಚಟುವಟಿಕೆಗಳು ಹಾಗೂ ಗರಿಷ್ಠ ಹಂತದ ಪಾಲ್ಗೊಳ್ಳುವಿಕೆ ಎಂದು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ. ಕನಿಷ್ಠ ಹಂತದ ಚಟುವಟಿಕೆಗಳಲ್ಲಿ ರಾಜಕೀಯ ಉತ್ತೇಜನ ಪಡೆಯುವ ಕನಿಷ್ಠ ಹಾಗೂ ಮೊದಲನೆಯ ಹಂತವಾಗಿದೆ. ಏರುಮುಖವಾದಂತೆ ಮತದಾನ, ರಾಜಕೀಯ ಚರ್ಚೆ ಮಾಡುವುದು ಹಾಗೂ ಚರ್ಚೆಯನ್ನು ಪ್ರೋತ್ಸಾಹಿಸುವುದು, ಇತರರಿಗೆ ನಿರ್ದಿಷ್ಟ ರೀತಿಯಲ್ಲಿ ಮತ ನೀಡುವಂತೆ ತಿಳಿ ಹೇಳುವುದು ಮುಂತಾದ ಅಂಶಗಳನ್ನು ಒಳಗೊಂಡಿದೆ. ಎರಡನೆಯ ಹಂತವೆಂದರೆ ಪರಿವರ್ತನಾ ಅಥವಾ ಮಧ್ಯಂತರ ಚಟುವಟಿಕೆಗಳು ಈ ಹಂತದಲ್ಲಿ ಸಾರ್ವಜನಿಕ ಅಧಿಕಾರಿ ಅಥವಾ ರಾಜಕೀಯ ವ್ಯಕ್ತಿಯನ್ನು ಭೇಟಿಯಾಗುವುದು, ಪಕ್ಷಗಳು ಅಥವಾ ರಾಜಕೀಯ ವ್ಯಕ್ತಿಗಳಿಗೆ ದೇಣಿಗೆ ನೀಡುವುದು ಹಾಗೂ ರಾಜಕೀಯ ಸಭೆ ಸಮಾರಂಭಗಳಿಗೆ ಭಾಗವಹಿಸುವುದು ಮುಂತಾದ ಹಂತಗಳನ್ನು ಒಳಗೊಂಡಿದೆ. ಕೊನೆಯ ಹಾಗೂ ಗರಿಷ್ಠ ಹಂತವೆಂದರೆ ಅಧಿಕಾರ ಸಂಬಂಧಿ ಚಟುವಟಿಕೆಗಳು. ಈ ಹಂತದಲ್ಲಿ ರಾಜಕೀಯ ಪ್ರಚಾರಕ್ಕಾಗಿ ಸಮಯ ವ್ಯಯ ಮಾಡುವುದು, ಪಕ್ಷದ ಸಕ್ರಿಯ ಕಾರ್ಯಕರ್ತನಾಗುವುದು, ಪಕ್ಷಗಳ ನಿರ್ಣಯ ಕೂಟ ಅಥವಾ ತಂತ್ರಕೂಟಗಳಲ್ಲಿ ಭಾಗವಹಿಸುವುದು, ಸ್ಥಾನಗಳಿಗೆ ಸ್ಪರ್ಧಿಸುವುದು ಇತ್ಯಾದಿ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ.

**ಬೇಡ ಮಹಿಳೆಯರ ರಾಜಕೀಯ ಸಹಭಾಗಿತ್ವ**

ಬೇಡ ಮಹಿಳೆಯರ ರಾಜಕೀಯ ಸಹಭಾಗಿತ್ವ ಇತ್ತೀಚಿನ ದಿನಗಳಲ್ಲಿ ಸುಧಾರಿಸುತ್ತಿದೆ. ಬೇಡ ಮಹಿಳೆಯು ರಾಜಕೀಯವಾಗಿ ಕನಿಷ್ಠ ಮತ್ತು ಮಧ್ಯಮ ಹಂತದಲ್ಲಿದ್ದಾಳೆ. ರಾಜಕೀಯಕ್ಕೆ ಸಂಬಂಧಿಸಿದ ವಿಷಯಗಳನ್ನು ಹೆಚ್ಚಾಗಿ ದೃಶ್ಯ ಮಾಧ್ಯಮ, ಸ್ನೇಹಿತರು, ಕುಟುಂಬದ ಸದಸ್ಯರಿಂದ ಪಡೆದು ಜಾಗೃತರಾಗುತ್ತಿದ್ದಾರೆ.

**ಬೇಡ ಮಹಿಳೆಯರ ಮತದಾನ ಜಾಗೃತಿ**

ಚುನಾವಣೆಯಲ್ಲಿ ಮತದಾನವು ಮಹತ್ವದ ಪಾತ್ರವಹಿಸಿದೆ. ಪ್ರಮುಖವಾಗಿ ಮತದಾನದಲ್ಲಿ ತೊಡಗಬೇಕೆ ಬೇಡವೆ ಯಾರಿಗೆ ನೀಡಬೇಕು ಎಂಬ ಅರಿವು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದೆ. ಸಾಮಾನ್ಯವಾಗಿ ಬೇಡ ಮಹಿಳೆಯರಲ್ಲಿ ಮತದಾನ ಮಾಡುವಾಗ ಕುಟುಂಬದ ಸದಸ್ಯರ ಪ್ರಭಾವವಿರುತ್ತದೆ. ಈ ಹಿಂದೆ ಮತದಾನದ ಪ್ರಕ್ರಿಯೆಲಿ ಬೇಡ ಮಹಿಳೆಯರು ಆಸಕ್ತಿ ತೋರುತ್ತಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳ ಪ್ರಭಾವ ಹಾಗೂ ಸ್ಪರ್ಧಿಗಳ ಪ್ರಚಾರದಿಂದಾಗಿ ಚುನಾವಣಾ ದಿನಾಂಕ, ಸಮಯ, ಯಾರಿಗೆ ಮತ ನೀಡಬೇಕು ಇತ್ಯಾದಿ ವಿಷಯಗಳ ಬಗ್ಗೆ ಜಾಗೃತಿ ಹೊಂದಿದ್ದಾರೆ.

**ರಾಜಕೀಯ ಸಭೆಗಳಿಗೆ ಭಾಗವಹಿಸುವುದು**

ಈ ಹಿಂದೆ ಬೇಡ ಮಹಿಳೆಯರು ರಾಜಕೀಯ ಚಟುವಟಿಕೆಗಳಲ್ಲಿ ಅಷ್ಟಾಗಿ ಭಾಗವಹಿಸುತ್ತಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಬಹಿರಂಗ ಸಭೆ, ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದಾಳೆ. ಶಿಕ್ಷಣ ಹೆಚ್ಚಾದಂತೆ ರಾಜಕೀಯ ಅರಿವು ಕೂಡ ಇವರಲ್ಲಿ ಮೂಡುತ್ತಿದೆ.

**ಸಾರ್ವಜನಿಕ ಪ್ರತಿಭಟನೆಗಳಲ್ಲಿ ಭಾಗವಹಿಸುವುದು**

ಮಹಿಳೆಯರು ಇತ್ತೀಚಿನ ದಿನಗಳಲ್ಲಿ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ಹೋರಾಟಗಳಲ್ಲಿ ಭಾಗವಹಿಸುತ್ತಿದ್ದಾಳೆ. ತನ್ನ ಹಕ್ಕುಗಳಿಗೆ ಚ್ಯುತಿ ಬಂದಾಗ ಅಥವಾ ತಾನು ನಂಬಿದ್ದ ರಾಜಕೀಯ ಸಿದ್ಧಾಂತಗಳಿಗೆ ವಿರುದ್ಧವಾಗಿ ಚಟುವಟಿಕೆಗಳು ನಡೆದಾಗ ರಾಜಕೀಯ ಹೋರಾಟ, ಪ್ರತಿಭಟನೆಗಳಲ್ಲಿ ಭಾಗವಹಿಸುವುದು ಅಧ್ಯಯನದ ಸಂದರ್ಭದಲ್ಲಿ ಗುರುತಿಸಲಾಗಿದೆ. ಅಧಿಕಾರಿಗಳಿಗೆ ತಮ್ಮ ಅತೃಪ್ತಿಯ ಸಂದೇಶಗಳನ್ನು ರವಾನಿಸುವಲ್ಲಿ ಪ್ರತಿಭಟನೆಗಳು ಸಹಾಯ ಮಾಡುತ್ತವೆ. ಇತ್ತೀಚೆಗೆ ಭಾರತದ ಬುಡಕಟ್ಟು ಸಮುದಾಯಗಳು ತಮ್ಮ ಸಮಸ್ಯೆಗಳನ್ನು ಚಳುವಳಿಗಳ ಮೂಲಕ ಪರಿಹರಿಸಿಕೊಳ್ಳುತ್ತಾರೆ. ಸಾರ್ವಜನಿಕ ಸಭೆಗಳಲ್ಲಿ ಪಾಲ್ಗೊಳ್ಳುವಿಕೆ ಹಾಗೂ ಪ್ರತಿಭಟನೆಗಳಲ್ಲಿ ಭಾಗವಹಿಸುವಿಕೆ ಒಂದೇ ಸ್ವರೂಪವೆಂದು ಗ್ರಹಿಸುವುದು ತಪ್ಪು. ಸಾರ್ವಜನಿಕ ಸಭಿಕರು ವ್ಯಕ್ತಿಗೆ ವಿವಿಧ ಸಂಗತಿಗಳ ಬಗ್ಗೆ ಅರಿವು ಮೂಡಿಸುವುದಕ್ಕೆ ಸೀಮಿತಗೊಂಡರೆ, ಪ್ರತಿಭಟನೆಗಳು ವಿವಿಧ ಸಂಗತಿಗಳ ವಿರೋಧದ ಅಭಿವ್ಯಕ್ತಿಗಳಾಗುತ್ತವೆ. ರಾಜಕೀಯ ಸಭೆಗಳಿಗಿಂತ ಪ್ರತಿಭಟನೆಗಳಲ್ಲಿ ಭಾಗವಹಿಸುವವರ ಪ್ರಮಾಣ ಕಡಿಮೆಯಾಗಿರುತ್ತದೆ. ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಹೊಸಪೇಟೆ ಹಾಗೂ ಕೂಡ್ಲಿಗಿ ತಾಲೂಕುಗಳಲ್ಲಿ ಬೇಡ ಮಹಿಳೆಯ ಪ್ರತಿಭಟನೆಗಳಲ್ಲಿ ಭಾಗವಹಿಸುವ ಪ್ರಮಾಣ ವಿರಳವಾಗಿದೆ.

**ಜಿಲ್ಲೆಯ ರಾಜಕಾರಣಿಗಳ ಭೇಟಿ ಹಾಗೂ ನಿರ್ದಿಷ್ಟ ಪಕ್ಷಕ್ಕೆ ಪ್ರಚಾರ ಮಾಡುವುದು**

ಅಲ್ಪ ಪ್ರಮಾಣದ ಬೇಡ ಮಹಿಳೆಯರು ಮಾತ್ರ ರಾಜಕಾರಣಿಗಳನ್ನು ಹಾಗೂ ಸಾರ್ವಜನಿಕ ಅಧಿಕಾರಿಯನ್ನು ಭೇಟಿ ಮಾಡುತ್ತಾರೆ. ಉತ್ತಮ ಸಾಮಾಜಿಕ ವ್ಯವಸ್ಥೆಯಲ್ಲಿ ಹಾಗೂ ರಾಜಕೀಯ ಸ್ಥಾನ ಪಡೆದಿರುವವರು ಸುಲಭವಾಗಿ ರಾಜಕಾರಣಿ ಹಾಗೂ ಅಧಿಕಾರಿಯನ್ನು ಭೇಟಿ ಮಾಡುತ್ತಾರೆ. ಇದು ಬೇಡ ಮಹಿಳೆಯರು ಅಧಿಕಾರ ಸ್ಥಾನ ಪಡೆಯುವ ಉತ್ತಮ ಮಾರ್ಗವಾಗಿದೆ. ಇತ್ತೀಚಿನ ಅಧ್ಯಯನಗಳ ಪ್ರಕಾರ, ಬೇಡ ಮಹಿಳೆಯರು ರಾಜಕೀಯ ಅಥವಾ ದೊಡ್ಡವರ ಮೂಲಕವೇ ತಮ್ಮ ಸಮಸ್ಯೆಗೆ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ ಎಂಬುದನ್ನು ಕಂಡುಕೊಂಡಿವೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಅಧಿಕಾರಿಗಳನ್ನು ಭೇಟಿಯಾಗುವುದಕ್ಕಿಂತ ರಾಜಕಾರಣಿಗಳ ಭೇಟಿ ಸುಲಭವಾಗಿದೆ ಎಂದು ಪರಿಭಾವಿಸಲಾಗಿದೆ.

**ರಾಜಕೀಯ ಸಂಘಟನೆಯಲ್ಲಿ ಸದಸ್ಯತ್ವ ಪಡೆಯುವುದು:**

ಬೇಡ ಮಹಿಳೆಯರ ಸದಸ್ಯತ್ವವನ್ನು ಮೂರು ಪ್ರಕಾರಗಳಲ್ಲಿ ಗುರುತಿಸಬಹುದು. ಒಂದು ಪಕ್ಷದೊಂದಿಗೆ ಮಾನಸಿಕವಾಗಿ ಗುರುತಿಸಿಕೊಳ್ಳುವುದು, ಎರಡು ಚಂದಾ ನೀಡುವ ಮೂಲಕ ಪಕ್ಷದ ಸದಸ್ಯತ್ವ ಪಡೆಯುವುದು, ಕೊನೆಯದಾಗಿ ಪಕ್ಷದ ವ್ಯವಹಾರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು. ಮಿಲ್‌ಬ್ರಾಡ್ ಪ್ರಕಾರ ಮೊದಲ ಹಾಗೂ ಎರಡನೆಯ ಗುಂಪು ತಟಸ್ಥ ಸದಸ್ಯತ್ವವಾದರೆ, ಪಕ್ಷದ ವ್ಯವಹಾರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಿಕೆಯು ಸಕ್ರಿಯ ಸದಸ್ಯತ್ವವಾಗಿದೆ. ಇವರು ಪಕ್ಷದ ವಿವಿಧ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಅವುಗಳಲ್ಲಿ ಮುಖ್ಯವೆಂದರೆ ಪಕ್ಷದ ಪರವಾಗಿ ಮತದಾರರಲ್ಲಿ ಪ್ರಚಾರ ಮಾಡುವುದು. ಬಹಳಷ್ಟು ಸಕ್ರಿಯ ಕಾರ್ಯಕರ್ತರು ನಾಯಕರಾಗಿರುತ್ತಾರೆ. ಅಥವಾ ನಾಯಕರಾಗುವ ಅಭಿಲಾಷೆ ಹೊಂದುತ್ತಾರೆ. ಆದರೆ ಎಲ್ಲಾ ಸಂಘಟನೆಗಳಲ್ಲಿರುವಂತೆ ಬಹುತೇಕರು ಅನುಯಾಯಿಗಳೇ ಆಗಿರುತ್ತಾರೆ. ಸಕ್ರಿಯ ಕಾರ್ಯಕರ್ತರು ಹಾಗೂ ನಾಯಕರನ್ನು ಒಟ್ಟಾಗಿ ಪರಿಗಣಿಸಿದರೆ ಅವರ ಸಂಖ್ಯೆಯು ಬಹುತೇಕ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ಶೇಕಡ 5ಕ್ಕಿಂತ ಕಡಿಮೆ ಇರುತ್ತದೆ. ಕರ್ನಾಟಕದಲ್ಲಿ ಅತ್ಯಂತ ಕಡಿಮೆ ಪ್ರಮಾಣದ ಬೇಡ ಮಹಿಳೆಯರು ಮಾತ್ರ ರಾಜಕೀಯ ಪಕ್ಷಗಳಲ್ಲಿ ಸದಸ್ಯತ್ವ ಪಡೆದಿರುವುದು ಕಂಡುಬರುತ್ತದೆ.

**ರಾಜಕೀಯ ಅಧಿಕಾರಕ್ಕಾಗಿ ಸ್ಪರ್ಧಿಸುವುದು ಹಾಗೂ ಅಧಿಕಾರ ಪಡೆದುಕೊಳ್ಳುವುದು:**

ರಾಜಕೀಯ ಸಂರಚನೆಯಲ್ಲಿ ಕೇಂದ್ರ ಅಥವಾ ರಾಜ್ಯ ಭಾಗದಲ್ಲಿ ಪಕ್ಷ ಹಾಗೂ ರಾಜಕೀಯ ಸಂಸ್ಥೆಗಳಲ್ಲಿ ಅಧಿಕಾರ ಪಡೆಯುವವರು ಕಂಡುಬರುತ್ತಾರೆ. ಕಠಿಣ ಶಿಸ್ತು ಕಂಡುಬರುವ ಪಕ್ಷಗಳಲ್ಲಿ ಉನ್ನತ ಹುದ್ದೆಗಳನ್ನು ಕೌಟುಂಬಿಕ ಹಿನ್ನೆಲೆಯಲ್ಲಿ ತುಂಬಲಾಗುತ್ತದೆ. ಕೆಳಹಂತದ ಸ್ಥಾನಗಳನ್ನು ಪಡೆಯಲು ಆದೇಶಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಾಮರ್ಥ್ಯ ಅಗತ್ಯವಾಗಿರುತ್ತವೆ. ಹಾಗೆಯೇ ಇತರೆ ಪಕ್ಷಗಳಲ್ಲಿ ಉನ್ನತ ಸ್ಥಾನಗಳನ್ನು ಪಡೆಯಲು ಕ್ರಿಯಾಶೀಲತೆ ಹಾಗೂ ಶ್ರೇಷ್ಠಮಟ್ಟದ ಆತ್ಮಬಲ ಅಗತ್ಯವಾಗಿರುತ್ತದೆ. ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಬೇಡ ಮಹಿಳೆಯರನ್ನು ಈ ಹಂತದಲ್ಲಿ ಗಣನೀಯ ಸಂಖ್ಯೆಯಲ್ಲಿ ಭಾಗವಹಿಸುವುದನ್ನು ನಿರೀಕ್ಷಿಸುವುದು ಕಷ್ಟ. ಕರ್ನಾಟಕದ ಅತ್ಯಂತ ಕನಿಷ್ಠ ಸಂಖ್ಯೆಯ ಬೇಡ ಮಹಿಳೆಯರು ಮಾತ್ರ ರಾಜಕೀಯ ಅಧಿಕಾರಕ್ಕಾಗಿ ಸ್ಪರ್ಧಿಸುವುದು ಕಂಡುಬರುತ್ತದೆ. ಇದರ ಪ್ರಮಾಣವನ್ನು ಹೋಲಿಸಲು ದತ್ತಾಂಶಗಳು ಲಭ್ಯವಿಲ್ಲ. ಆದರೆ ಬಳ್ಳಾರಿ ಹಾಗೂ ಹೊಸಪೇಟೆ ತಾಲ್ಲೂಕುಗಳಲ್ಲಿ ಸ್ವಲ್ಪಮಟ್ಟಿಗೆ

ಕನಿಷ್ಟ ಸಂಖ್ಯೆಯಷ್ಟು ಬೇಡ ಮಹಿಳೆಯರು ಮಾತ್ರ ಅಧಿಕಾರಕ್ಕಾಗಿ ಸ್ಪರ್ಧಿಸುವುದು ಭಾಗವಹಿಸುವುದು ಕಂಡುಬರುತ್ತದೆ. ಕೂಡ್ಲಿಗಿ ಗ್ರಾಮೀಣ ಪ್ರದೇಶದ ಮಹಿಳೆಯರು ಸ್ವಲ್ಪಮಟ್ಟಿಗೆ ಈ ಹಂತದಲ್ಲಿ ಭಾಗವಹಿಸುವುದು ಕಂಡುಬರುತ್ತದೆ. ಆದರೆ ಅತ್ಯುನ್ನತ ಹಂತದಲ್ಲಿ ಬೇಡ ಮಹಿಳೆಯರ ಪಾಲ್ಗೊಳ್ಳುವಿಕೆ ನೀರಸವಾಗಿದೆ.

ಭಾರತೀಯ ರಾಜಕೀಯ ಸಂದರ್ಭದಲ್ಲಿ ಮಹಿಳೆಯ ಸಾಮಾಜಿಕ ಸ್ಥಾನಮಾನ, ಆರ್ಥಿಕ, ಶೈಕ್ಷಣಿಕ ಅರ್ಹತೆಗಳು ಕೂಡ ಅಗತ್ಯವಾಗಿವೆ. ಬೇಡ ಮಹಿಳೆಯರಿಗೆ ಈ ಎಲ್ಲ ಅರ್ಹತೆಗಳ ಜೊತೆಗೆ ಪಕ್ಷದ ಹಾಗೂ ಬಹುಸಂಖ್ಯಾತರ ಬೆಂಬಲ ಪಡೆಯುವ ಸಾಮರ್ಥ್ಯಗಳು ಕೂಡ ಅಗತ್ಯವಾಗಿ ಬೇಕಾಗುತ್ತದೆ. ಈ ಅಧ್ಯಯನದಲ್ಲಿ ಅಧಿಕಾರ ಪಡೆಯುವುದೆಂದರೆ ರಾಜಕೀಯ ಸಂಸ್ಥೆಗಳಾದ ಗ್ರಾಮಪಂಚಾಯಿತಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ನಗರಸಭೆ, ಮಹಾನಗರಸಭೆಗಳಲ್ಲಿ ಸದಸ್ಯ ಅಥವಾ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳನ್ನು ಪಡೆಯುವುದು ಹಾಗೂ ವಿಧಾನಸಭೆ ಹಾಗೂ ಸಂಸತ್ತಿನಲ್ಲಿ ಸದಸ್ಯತ್ವ ಪಡೆಯುವುದು ಎಂದು ಪರಿಭಾವಿಸಿಕೊಳ್ಳಲಾಗಿದೆ. ಕರ್ನಾಟಕದಲ್ಲಿ ವಿವಿಧ ಭಾಗಗಳಲ್ಲಿ ರಾಜಕೀಯ ಸಹಭಾಗಿತ್ವ ಹಾಗೂ ಅಧಿಕಾರವನ್ನು ಪಡೆಯಲು ಹಂತ ಹಂತಗಳಲ್ಲಿ ಸಕ್ರಿಯವಾಗಿದ್ದಾರೆ ಎಂಬುವುದು ಕಾಣಬಹುದಾಗಿದೆ.

**ರಾಜಕೀಯ ಸಹಭಾಗಿತ್ವ ಹಾಗೂ ಅಭಿವೃದ್ಧಿ**

ರಾಜಕೀಯ ಸಹಭಾಗಿತ್ವದ ನಂತರ ಬೇಡ ಮಹಿಳೆಯರು ನಿರ್ದಿಷ್ಟ ರಾಜಕೀಯ ಪಕ್ಷದೊಂದಿಗೆ ಸದಸ್ಯತ್ವ ಪಡೆದ ನಂತರ ಅಧಿಕಾರ ಪಡೆಯುವಲ್ಲಿ ಯಶಸ್ವಿಯಾದಾಗ ಕಂಡುಬರುವ ಮುಂದಿನ ಹಂತವೇ ಅಭಿವೃದ್ಧಿ. ಇದು ಅಧಿಕಾರ ಹಂಚಿಕೆ ಹಾಗೂ ರೂಪಿಸುವಿಕೆಗಳ ವಿಧಾನವಾಗಿದೆ. ಈ ದೃಷ್ಟಿಕೋನದಲ್ಲಿ ರಾಜಕಾರಣವನ್ನು ಪರಿಭಾವಿಸುವುದು ಸರ್ವವ್ಯಾಪಕವಾಗಿದೆ. ರಾಜಕಾರಣದ ಪಾತ್ರ ಹಾಗೂ ಸ್ವರೂಪದಲ್ಲಿ ಯಾವುದೇ ರೀತಿಯ ತಾರತಮ್ಯವಿಲ್ಲದೆ ವಿವಿಧ ಸಂಸ್ಥೆ ಹಾಗೂ ಸಂಘಟನೆಗಳಲ್ಲಿ ಅದರ ಪ್ರಕ್ರಿಯೆಯನ್ನು ಕಾಣಬಹುದು. ರಾಜಕಾರಣವು ಆಡಳಿತ ಕಲೆಗೆ ಸಂಬಂಧಿಸಿದ್ದು, ಅದು ರಾಜ್ಯ ಸರ್ಕಾರ ಹಾಗೂ ಇತರೆ ಸಂಸ್ಥೆಗಳಲ್ಲಿ ಅಧಿಕಾರಯುತ ಸ್ಥಾನಗಳನ್ನು ಪಡೆಯುವ ಪಾತ್ರಧಾರಿಗಳಿಗೆ ಸಂಬಂಧಿಸಿದೆ. ಅದು ಅಭಿವೃದ್ಧಿ ಸಾಧನೆಗೆ ಸಂಬಂಧಿಸಿದ ಸಂಪನ್ಮೂಲಗಳನ್ನು ಹಂಚುವ ಹಾಗೂ ಮರು ಹಂಚಿಕೆಯ ನಿರ್ಣಯಗಳನ್ನು ತೆಗೆದುಕೊಳ್ಳುವ ಆಡಳಿತ ಯಂತ್ರದಲ್ಲಿ ಅಧಿಕಾರ ಸ್ಥಾನ ಪಡೆಯುವವರ ಕ್ರಿಯೆಗೆ ಕೂಡ ಸಂಬಂಧಸಿದೆ. ರಾಜಕಾರಣವು ನಿರ್ಧರಿಸುವ ಮೌಲ್ಯಗಳು, ಸಂಪನ್ಮೂಲಗಳ ಹಂಚಿಕೆ ಹಾಗೂ ಮರುಹಂಚಿಕೆಯ ನಿರ್ಣಯಗಳ ಒಟ್ಟು ಉತ್ಪನ್ನವೇ ಸಾರ್ವಜನಿಕ ನೀತಿ ಹಾಗೂ ಕಾರ್ಯಕ್ರಮಗಳಾಗಿವೆ. ಈ ವ್ಯಾಖ್ಯಾನಗಳು ವಿಶ್ಲೇಷಿಸುವ ರಾಜಕಾರಣದ ಗ್ರಹಿಕೆಯು ಸರ್ವವ್ಯಾಪಕವಾಗಿದ್ದು ಅವುಗಳ ತಾತ್ವಿಕತೆಯನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ರಾಜಕಾರಣವೆಂದರೆ ಸಂಸ್ಥೆಗಳು, ನಿರ್ಣಯಗಳಲ್ಲಿ ಭಾಗವಹಿಸುವ ಪಾತ್ರಧಾರಿಗಳು, ಅವರು ರೂಪಿಸುವ ಹಾಗೂ ಕಾರ್ಯಗತಗೊಳಿಸುವ ಸಾರ್ವಜನಿಕ ನೀತಿ ಹಾಗೂ ಕಾರ್ಯಕ್ರಮಗಳು ಒಟ್ಟು ಪ್ರಕ್ರಿಯೆಯೆಂದು ಗ್ರಹಿಸಲಾಗಿದೆ. ರಾಜಕಾರಣದ ವ್ಯಾಖ್ಯಾನವು ಗುರುತಿಸುವವರು ಯಾರು ಎನ್ನುವ ಗ್ರಹಿಕೆಯು ಕೇವಲ ಅಧಿಕಾರ ಸ್ಥಾನಗಳನ್ನು ಪಡೆದ ವ್ಯಕ್ತಿಗಳನ್ನು ಮಾತ್ರ ಪ್ರತಿನಿಧಿಸುವುದಿಲ್ಲ. ಅದು ಅಧಿಕಾರ ಸ್ಥಾನಗಳ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ವ್ಯಕ್ತಿ ಹಾಗೂ

ಸಮಾಜವನ್ನು ಕೂಡ ಧ್ವನಿಸುತ್ತದೆ. ನಿರ್ದಿಷ್ಟ ವ್ಯವಸ್ಥೆಯಲ್ಲಿರುವ ಸಂಸ್ಥೆ, ನೀತಿ, ಕಾರ್ಯಕ್ರಮಗಳ ಕೇಂದ್ರಬಿಂದು ವ್ಯಕ್ತಿಯಾಗಿರುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಅಧಿಕಾರ ಹಾಗೂ ಅದರ ಸಂರಚನೆಗಳು ರೂಪುಗೊಳ್ಳುವಲ್ಲಿ ವ್ಯಕ್ತಿ ಪ್ರಮುಖ ಪಾತ್ರವಹಿಸುತ್ತಾನೆ. ವ್ಯಕ್ತಿಯ ಭಾಗವಹಿಸುವಿಕೆಯಿಂದ ಮಾತ್ರ ಅಧಿಕಾರ ಸಂರಚನೆಯು ರೂಪುಗೊಳ್ಳುತ್ತದೆ. ಇಂತಹ ಪ್ರಕ್ರಿಯೆಯಲ್ಲಿ ವ್ಯಕ್ತಿಯ ಪಾಲ್ಗೊಳ್ಳುವಿಕೆಯನ್ನು ರಾಜ್ಯಶಾಸ್ತ್ರದ ಭಾಷೆಯಲ್ಲಿ ರಾಜಕೀಯ ಸಹಭಾಗಿತ್ವದ ಅಭಿವೃದ್ಧಿಯೆಂದು ಸಾರ್ವತ್ರಿಕವಾಗಿ ಪರಿಭಾವಿಸಲಾಗಿದೆ. ಸಹಭಾಗಿತ್ವವಿಲ್ಲದೆ ರಾಜಕಾರಣ ರೂಪುಗೊಳ್ಳಲು ಸಾಧ್ಯವಿಲ್ಲ. ಸಹಭಾಗಿತ್ವವು ರಾಜಕಾರಣದ ಚಾಲಕ ಶಕ್ತಿಯಾಗಿ ಕಾರ್ಯನಿರ್ವಹಿಸುವುದಲ್ಲದೆ, ರಾಜಕೀಯ ವ್ಯವಸ್ಥೆಯನ್ನು ಸಹ ಅದು ರೂಪಿಸುತ್ತದೆ. ಹಾಗೂ ಅಭಿವೃದ್ಧಿ ಸಾಧಿಸಿಕೊಳ್ಳುವ ಮಾಧ್ಯಮವಾಗಿಯ ಅದು ಕಾರ್ಯನಿರ್ವಹಿಸುತ್ತದೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ರಾಜಕಾರಣವು ಮೌಲ್ಯಗಳನ್ನು ಹಂಚುವ ಹಾಗೂ ಮರುಹಂಚಿಕೆಯ ಅಧಿಕಾರ ಪಡೆದಿರುವ ವ್ಯವಸ್ಥೆಯಾಗಿದೆ. ಅದು ನೀತಿ ಹಾಗೂ ಕಾರ್ಯಕ್ರಮಗಳನ್ನು ರೂಪಿಸುವ ಶಕ್ತಿಯನ್ನು ಸಹ ಪಡೆದಿದೆ. ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಚಾಲನೆಗೆ ರಾಜಕಾರಣವು ಅತಿ ಮುಖ್ಯವಾದ ಮಾಧ್ಯಮವಾಗಿದೆ.

ಸಮಾಜದ ಮಾನವನ ಆರ್ಥಿಕ ಹಾಗೂ ರಾಜಕೀಯ ಸಂಗತಿಗಳು ಹಾಗೂ ಸಾಮಾಜಿಕ ಜೀವನಗಳು ಪರಸ್ಪರ ಪೂರಕ ಸಂಬಂಧವನ್ನು ಹೊಂದಿವೆ. ಬದಲಾವಣೆಯ ಒಂದು ಸ್ವರೂಪವು ಮತ್ತೊಂದನ್ನು ಪ್ರಭಾವಗೊಳಿಸುತ್ತದೆ. ಅಂದರೆ ಸಾಮಾಜಿಕ ಹಾಗೂ ಆರ್ಥಿಕ ಸ್ವರೂಪಗಳನ್ನು ಪುನರ್ರಚಿಸಿದೆ. ರಾಜಕೀಯ ಸ್ವರೂಪದ ಬದಲಾವಣೆ ಸಾಧ್ಯವಿಲ್ಲ. ಸರ್ಕಾರಗಳು ರೂಪಿಸುವ ಅಭಿವೃದ್ಧಿ ಪ್ರಕ್ರಿಯೆಯು ಅಂತಿಮವಾಗಿ ಮಾನವನ ಜೀವನದ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಬದುಕಿನ ಆಯಾಮಗಳ ಬದಲಾವಣೆಯನ್ನು ಒಳಗೊಂಡಿರುತ್ತದೆ ಎಂದು ಹೇಳಬಹುದು. ಜೀವನದ ಒಟ್ಟಾರೆ ಬದಲಾವಣೆಯು ಶ್ರೇಣೀಕೃತ ಜನರ ಸಂಬಂಧಗಳಲ್ಲಿ ಪರಿವರ್ತನೆಯನ್ನುಂಟು ಮಾಡುತ್ತದೆ. ಇದರ ಮುಖ್ಯ ಕಾರಣವೇನೆಂದರೆ ಅಭಿವೃದ್ಧಿ ಪ್ರಕ್ರಿಯೆಯು ಆರಂಭಗೊಂಡು ಹೆಚ್ಚು ಜನ ಮುಖ್ಯವಾಹಿನಿಯಲ್ಲಿ ಪಾಲ್ಗೊಂಡಂತೆ ಶ್ರೇಣಿಯ ವಿವಿಧ ಹಂತಗಳಲ್ಲಿರುವ ಜನರ ಕಾರ್ಯ ಚಟುವಟಿಕೆಗಳು ಗಣನೀಯವಾಗಿ ಹೆಚ್ಚಾಗುತ್ತದೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಬಡತನಕ್ಕೆ ತಳ್ಳಲ್ಪಟ್ಟ ಜನಸಮುದಾಯಗಳ ಜೀವನದಲ್ಲಿ ಸ್ವಲ್ಪಮಟ್ಟಿನ ಬದಲಾವಣೆ ಕಂಡುಬಂದರೆ ಅವರು ಇನ್ನೂ ಹೆಚ್ಚಿನ ಸುಧಾರಣೆಗಾಗಿ ಸರ್ಕಾರದ ಮೇಲೆ ಒತ್ತಡವನ್ನು ಹಾಕುತ್ತಾರೆ. ಈ ಎಲ್ಲಾ ತಾತ್ವಿಕ ಚರ್ಚೆಗಳು ರಾಜಕಾರಣ ಹಾಗೂ ಸರ್ಕಾರದ ಯಂತ್ರವು ವ್ಯಕ್ತಿಯ ಆರ್ಥಿಕ ಜೀವನಕ್ಕೆ ಹೊಸ ಆಯಾಮವನ್ನು ನೀಡುವ ಸಾಮರ್ಥ್ಯವನ್ನು ಒತ್ತಿ ಹೇಳುವ ಜೊತೆಗೆ ಉತ್ತಮ ಗುಣಮಟ್ಟದ ಜೀವನವಿಲ್ಲದೆ ಮಹಿಳೆಗೆ ರಾಜಕೀಯ ಸಹಭಾಗಿತ್ವವು ಸಾಧ್ಯವಾಗುವುದಿಲ್ಲ ಎಂಬ ಅಂಶಕ್ಕೆ ಹೆಚ್ಚು ಒತ್ತು ನೀಡುತ್ತವೆ. ಆದರೆ ಈ ತಾತ್ವಿಕತೆಗೆ ವಿರುದ್ಧವಾಗಿ ಸಹಭಾಗಿತ್ವ ಮಾತ್ರ ಅಭಿವೃದ್ಧಿಯನ್ನು ಸಾಧಿಸಬಹುದು. ಮಹಿಳೆಯರ ಸಕ್ರಿಯ ಸಹಭಾಗಿತ್ವದಿಂದ ಮಾತ್ರ ಅಭಿವೃದ್ಧಿಯ ಫಲಗಳನ್ನು ಪಡೆಯುವುದು ಸಾಧ್ಯ ಎಂದು ದೃಢಪಡಿಸುವ ಸಿದ್ಧಾಂತಗಳು ಇಂದು ಹೆಚ್ಚು ಗಟ್ಟಿಗೊಳ್ಳುತ್ತವೆ. ವರ್ತಮಾನದಲ್ಲಿ ಸುದ್ಧಿಯಲ್ಲಿರುವ ಅಭಿವೃದ್ಧಿಯ ಮಾದರಿಯೇ ಸಹಭಾಗಿತ್ವದ ಮಾದರಿ ಅಥವಾ ಜನರ

ಪಾಲ್ಗೊಳ್ಳುವಿಕೆಯ ಪ್ರಚಾರವಿದೆ. ಸಹಭಾಗಿತ್ವ ಮಾದರಿ ಅಭಿವೃದ್ಧಿಯ ಅರ್ಥ ಅತ್ಯಂತ ಸರಳವಾಗಿದ್ದು, ಜನರ ಬೇಕು ಬೇಡಗಳ ಕುರಿತು ಅವರೇ ನಿರ್ಧಾರ ಕೈಗೊಳ್ಳುವ, ಅಗತ್ಯವಿರುವ ಯೋಜನೆಗಳನ್ನು ರೂಪಿಸಿ ಅದನ್ನು ಕಾರ್ಯಾಚರಣೆಗೆ ತರುವ ಹೊಸ ಪರಿಕಲ್ಪನೆಯು ಸಹಭಾಗಿತ್ವ ಅಥವಾ ಜನರ ಪಾಲ್ಗೊಳ್ಳುವಿಕೆಯಿಂದ ಸಾಧ್ಯವಾಗುವ ಅಭಿವೃದ್ಧಿಯಾಗಿದೆ. ಕೆಲವು ಅಧ್ಯಯನಗಳ ಪ್ರಕಾರ ಸಕ್ರಿಯ ಸಹಭಾಗಿತ್ವ ಮಾತ್ರ ಜನಪರ ಯೋಜನೆಗಳು, ನೀತಿಗಳು ಹಾಗೂ ಕಾರ್ಯಕ್ರಮಗಳ ರೂಪಿಸುವಿಕೆಯನ್ನು ಪ್ರಭಾವಗೊಳಿಸುತ್ತದೆ. ಹಾಗೂ ನೀತಿಗಳನ್ನು ಮತ್ತಷ್ಟು ಜನಪರವಾಗಿಸುತ್ತದೆ. ಅಂದರೆ ರಾಜಕಾರಣ, ಸಹಭಾಗಿತ್ವ ಹಾಗೂ ಆ ಮೂಲಕ ಅಭಿವೃದ್ಧಿಯ ಸಾಧ್ಯತೆಗಳ ಸಂಬಂಧಗಳು ಪರಸ್ಪರ ಪೂರಕವಾಗಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಸಂವಿಧಾನವೂ ಕೂಡ ಸಮುದಾಯಗಳ ಅಭಿವೃದ್ಧಿಗೆ ಕಾನೂನುಬದ್ಧ ಚೌಕಟ್ಟು ನಿರ್ಮಿಸುವುದು ಅಗತ್ಯವಾಗುತ್ತದೆ. ಭಾರತದ ಸಂವಿಧಾನ ಇಂತಹ ಆದರ್ಶವನ್ನು ಸೃಷ್ಟಿಸಿದೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


- Sinhā, N. (2007). *Empowerment of women through political participation*. Gyan Books.
- Sivanna, N., & Gayathridevi, K. (2012). Political inclusion and participation of women in local governance : a study in Karnataka. *Journal of Rural and Development*, *31*(2), 193–210. http://nirdprojms.in/index.php/jrd/article/view/93454
- Vidya, K. C. (1997). *Political empowerment of women at the grassroots*.